ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು-570017
Telephone No: 0821-234338

CHAMUNDESHWARI ELECTRICITY
SUPPLY CORPORATION LIMITED
*(A Government of Karnataka Undertaking)*
Corporate Office,
CESC, Mysuru-570017
**Web Site: www.cescmysore.org.**
E-mail ID:gmhrd@cescmysore.org

Company Identity Number[CIN]:- **U40109KA2004SGC035177**

ಕ್ರಮಾಂಕ : ಸೆಸ್ಕ್/ಆ&ಮಾಸಂ/2022-23/ CYS-106 ದಿನಾಂಕ: 22 APR 2022

## ಅಧಿಕೃತ ಜ್ಞಾಪನ

ವಿಷಯ : ಅತ್ಯುತ್ತಮ ಕಾರ್ಯ ಮತ್ತು ಪಾಲನಾ ವಿಭಾಗ, ಕಾರ್ಯ ಮತ್ತು ಪಾಲನಾ ಉಪವಿಭಾಗ ಹಾಗೂ ಕಾರ್ಯ ಮತ್ತು ಪಾಲನಾ ಶಾಖೆಗಳನ್ನು ಗುರುತಿಸಿ ಪ್ರಶಂಸಾ ಪತ್ರ ನೀಡುವ ಬಗ್ಗೆ.

*******

ಚಾವಿಸನಿನಿಯಲ್ಲಿ 2021-22 ನೇ ಸಾಲಿನಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ ಕಾರ್ಯ ಮತ್ತು ಪಾಲನಾ ವಿಭಾಗ, ಕಾರ್ಯ ಮತ್ತು ಪಾಲನಾ ಉಪವಿಭಾಗ ಹಾಗೂ ಶಾಖೆಗಳನ್ನು ಗುರುತಿಸಿ, ಪ್ರಶಂಸನಾ ಪತ್ರ ಮತ್ತು ನಗದು ಪುರಸ್ಕಾರವನ್ನು ನೀಡುವ ಸಂಬಂಧ ನಿಗಮವು ಪ್ರಶಂಸನೀಯ ಕಾರ್ಯತತ್ಪರತೆಯನ್ನು ಕಾಯ್ದುಕೊಳ್ಳಲು ಹಾಗೂ ಮುಂಬರುವ ದಿನಗಳಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುವಂತೆ ನೌಕರರ ಹಾಗೂ ಅಧಿಕಾರಿಗಳನ್ನು ಪ್ರೋತ್ಸಾಹಿಸಲು, ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ ಕಾರ್ಯ ಮತ್ತು ಪಾಲನಾ ವಿಭಾಗ, ಕಾರ್ಯ ಮತ್ತು ಪಾಲನಾ ಉಪವಿಭಾಗ ಹಾಗೂ ಶಾಖೆಗಳನ್ನು ಗುರುತಿಸಿ, ಪ್ರಶಂಸನಾ ಪತ್ರ ಮತ್ತು ಈ ಕೆಳಗಿನಂತೆ ನೆನಪಿನ ಕಾಣಿಕೆ ಪುರಸ್ಕಾರವನ್ನು ನೀಡುವ ಬಗ್ಗೆ ಅನುಮೋದಿಸಲಾಗಿದೆ.

(ರೂ.ಗಳಲ್ಲಿ)

| ಕ್ರ. ಸಂ. | ವಿಭಾಗ/ಉಪವಿಭಾಗ/ಶಾಖೆ | ಪ್ರಶಸ್ತಿ ಶ್ರೇಣಿ | | |
|---|---|---|---|---|
| ನಿಗಮದ ಮಟ್ಟದಲ್ಲಿ | | | | |
| 1 | ವಿಭಾಗ | ಪ್ರಥಮ | ದ್ವಿತೀಯ | ತೃತೀಯ |
| ವೃತ್ತ ಮಟ್ಟದಲ್ಲಿ | | | | |
| 2 | ಉಪವಿಭಾಗ | ಪ್ರಥಮ | ದ್ವಿತೀಯ | ತೃತೀಯ |
| 3 | ಶಾಖೆ | ಪ್ರಥಮ | ದ್ವಿತೀಯ | ತೃತೀಯ |

ಸದರಿ ಪ್ರಶಸ್ತಿಗೆ ಆಯ್ಕೆ ಮಾಡುವ ಸಲುವಾಗಿ ಈ ಕೆಳಕಂಡ ಸಮಿತಿಯನ್ನು ರಚಿಸಿ ಆದೇಶಿಸಲಾಗಿದೆ.

1. ನಿರ್ದೇಶಕರು (ತಾಂತ್ರಿಕ) – ಅಧ್ಯಕ್ಷರು
2. ಮುಖ್ಯ ಆರ್ಥಿಕ ಅಧಿಕಾರಿ – ಉಪಾಧ್ಯಕ್ಷರು
3. ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ.ಪ) – ಸದಸ್ಯರು
4. ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾಸಂ) – ಸದಸ್ಯರು ಮತ್ತು ಸಂಚಾಲಕರು
5. ಪ್ರಧಾನ ವ್ಯವಸ್ಥಾಪಕರು(ಎ&ಆರ್) – ಸದಸ್ಯರು
6. ಪ್ರಧಾನ ವ್ಯವಸ್ಥಾಪಕರು(ವಾಣಿಜ್ಯ) – ಸದಸ್ಯರು
7. ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ) – ಸದಸ್ಯರು
8. ಪ್ರಧಾನ ವ್ಯವಸ್ಥಾಪಕರು(ಖರೀದಿ) – ಸದಸ್ಯರು
9. ಪ್ರಧಾನ ವ್ಯವಸ್ಥಾಪಕರು(ಯೋಜನೆಗಳು) – ಸದಸ್ಯರು

ಸದರಿ ಸಮಿತಿಯು 2021-22ನೇ ಸಾಲಿಗೆ ಕೆಳಗಿನಂತೆ ಪ್ರಶಸ್ತಿಗೆ ಅರ್ಹ ಕಾ ಮತ್ತು ಪಾ ವಿಭಾಗ, ಉಪವಿಭಾಗ ಹಾಗೂ ಶಾಖೆಗಳನ್ನು ಗುರುತಿಸಿ ಪ್ರಶಸ್ತಿಗೆ ಶಿಫಾರಸ್ಸು ಮಾಡಲು ಆದೇಶಿಸಲಾಗಿದೆ.

ಪ್ರಶಸ್ತಿಗೆ ಆಯ್ಕೆ ಮಾಡುವಾಗ ಈ ಕೆಳಕಂಡ ಮಾನದಂಡಗಳನ್ನು (parameter) ಆಧರಿಸಿ ನಿರ್ಧರಿಸಲು ಸೂಚಿಸಲಾಗಿದೆ.

ಮು.ತಿ.ನೋ

| ಕ್ರ. ಸಂ | ವಿಷಯಗಳು | ನಿಗದಿತ ಒಟ್ಟು ಅಂಕಗಳು | ವಿಶ್ಲೇಷಣೆ | ಸಾಧನವಾರು ಅಂಕಗಳ ಹಂಚಿಕೆ |
|---|---|---|---|---|
| 1 | ಕನ್ನಡದಲ್ಲಿ ಪತ್ರ ವ್ಯವಹಾರ ಮತ್ತು ಕಾರ್ಯಕ್ಷಮತೆ | 5 | 80% ರ ಮೇಲ್ಪಟ್ಟು | 5 |
| 2 | ಕಂದಾಯ ಅಂತಿಮ ಶುಲ್ಕ ಹಾಗೂ ಬೇಡಿಕೆಗಳ ಅನುಪಾತ | 8 | =<0.3ರ ಪಟ್ಟು | 8 |
| | | | 0.3 ರ ಮೇಲ್ಪಟ್ಟು | 0 |
| 3 | ದೀರ್ಘಕಾಲದಿಂದ ವಿದ್ಯುತ್ ನಿಲುಗಡೆ ಮಾಡಿದ ಸ್ಥಾವರಗಳ ಪರಿವೀಕ್ಷಣೆ ಹಾಗೂ ಕಂಡು ಬಂದ ಚಾಲ್ತಿಯಲ್ಲಿದ್ದ ಸ್ಥಾವರಗಳ ಕಂದಾಯ ವಸೂಲಾತಿ | 2 | ಮೊತ್ತ | 2 |
| 4 | ಅತ್ಯಂತ ಹೆಚ್ಚು ಬಾಕಿ ಇರುವ ಖಾಸಗಿ ಸ್ಥಾವರಗಳ ವಸೂಲಾತಿ ಮಾಡಿದ ವಿವರ | | | |
| | 1. ರೂ.25,000 ರಿಂದ 50,000 (ಉಪವಿಭಾಗ ಪರಿಮಿತಿಯಲ್ಲಿ) | 1 | ಸಂಖ್ಯೆ/ ಮೊತ್ತ | 1 |
| | 2. ರೂ.50,000 ಮೇಲ್ಪಟ್ಟು (ವಿಭಾಗ ಪರಿಮಿತಿಯಲ್ಲಿ) | 2 | ಸಂಖ್ಯೆ/ ಮೊತ್ತ | 2 |
| 5 | ಒಟ್ಟು ಡಿಸ್ ಕನೆಕ್ಟ್ ಮಾಡಿದ ಸ್ಥಾವರಗಳ ಸಂಖ್ಯೆ ಮತ್ತು ಡಿ & ಆರ್ ಫೀ ವಸೂಲಾತಿ ಮಾಡಿದ ವಿವರ | 2 | ಸಂಖ್ಯೆ | 2 |
| | | | ಮೊತ್ತ | |
| 6 | ಕ್ಲಪ್ತವಾಗಿ ಮಾಸಿಕ ಡಿ.ಸಿ.ಬಿ. ತಯಾರಿಸಿ ಸಲ್ಲಿಸಿದ್ದ ಬಗ್ಗೆ (ತ್ವರಿತವಾಗಿ ಡಿ.ಸಿ.ಬಿ ಸಲ್ಲಿಸಿದ್ದ ದಿನಾಂಕದ ಆಧಾರದಲ್ಲಿ) | 5 | ಪ್ರತಿ ತಿಂಗಳು 2ನೇ ತಾರೀಖಿನೊಳಗಾಗಿ ಸಲ್ಲಿಸಿದರೆ | 5 |
| | | | ಪ್ರತಿ ತಿಂಗಳು 3ನೇ ತಾರೀಖಿನೊಳಗಾಗಿ ಸಲ್ಲಿಸಿದರೆ | 4 |
| | | | ಪ್ರತಿ ತಿಂಗಳು 4ನೇ ತಾರೀಖಿನೊಳಗಾಗಿ ಸಲ್ಲಿಸಿದರೆ | 3 |
| | | | ಪ್ರತಿ ತಿಂಗಳು 5ನೇ ತಾರೀಖಿನೊಳಗಾಗಿ ಸಲ್ಲಿಸಿದರೆ | 2 |
| | | | ಪ್ರತಿ ತಿಂಗಳು 6ನೇ ತಾರೀಖಿನೊಳಗಾಗಿ ಸಲ್ಲಿಸಿದರೆ | 0 |
| 7 | ಕಂದಾಯ ಗುರಿಗೆ ಸಂಬಂಧಿಸಿದಂತೆ ವಸೂಲಿ ಸಾಮರ್ಥ್ಯ (%) | 5 | 100ರಷ್ಟು | 5 |
| | | | 90% ರಿಂದ 99% | 4 |
| | | | 80% ರಿಂದ 89% | 3 |
| 8 | ಒಟ್ಟು ಬಿಲ್ಲಿಂಗ್ ಸಾಮರ್ಥ್ಯ | 5 | 100ರಷ್ಟು | 5 |
| | | | 98% ರಿಂದ 99% | 4 |
| | | | 96%ರಿಂದ 97% | 3 |
| 9 | ಎ.ಜಿ.ರಿಪೋರ್ಟ್‌ಗಳಿಗೆ ವಿವರಣೆ ಸಲ್ಲಿಕೆ ಸಮೀಕ್ಷೆ | 2 | ಬಾಕಿ ಇರದಿದ್ದರೆ | 2 |
| | | | ಬಾಕಿ ಇದ್ದರೆ | 0 |
| 10 | ಟೆಸ್ಟ್ ರಿಪೋರ್ಟ್ ಸ್ವೀಕೃತವಾಗಿ ಕಂದಾಯ ಶಾಖೆಯಲ್ಲಿ ಬಾಕಿ ಉಳಿದಿರುವ ಪ್ರಕರಣಗಳು | 2 | ಬಾಕಿ ಇರದಿದ್ದರೆ | 2 |
| | | | ಬಾಕಿ ಇದ್ದರೆ | 0 |
| 11 | ಎಆರ್‌ಆರ್ (ಸರಾಸರಿ ಕಂದಾಯ ವಸೂಲಾತಿ) ಹೆಚ್ಚಿಸುವದು | 5 | =<4.80 ಇದ್ದರೆ | 5 |
| | | | 4.80 ಕ್ಕಿಂತ ಕಡಿಮೆ ಇದ್ದರೆ | 0 |
| 12 | ವಿದ್ಯುತ್ ವಿತರಣಾ ಪರಿವರ್ತಕಗಳ ವಿಫಲತೆಗಳ ಪ್ರಮಾಣ (ಪ್ರತಿಶತ) | 5 | =<0.5% ಕ್ಕಿಂತ ಕಡಿಮೆ ಇದ್ದರೆ | 5 |
| | | | 0.5% ಕ್ಕಿಂತ ಹೆಚ್ಚಿಗೆ ಇದ್ದರೆ | 0 |
| 13 | ವಿತರಣಾ ನಷ್ಟ (ಪ್ರತಿಶತದಲ್ಲಿ) | 5 | >18% | 1 |
| | | | >17% | 2 |
| | | | >16% | 3 |
| | | | >15% | 4 |
| | | | =<15% | 5 |

. . . 3-

| | | | | |
|---|---|---|---|---|
| 14 | ದೋಷಪೂರಿತ ಮಾಪಕಗಳನ್ನು ಬದಲಾಯಿಸಿದಲ್ಲಿನ ಪ್ರಗತಿ | 8 | 100% | 8 |
| | | | 95% ರಿಂದ 99% | 6 |
| | | | 91% ರಿಂದ 94% | 4 |
| | | | 85% ರಿಂದ 90% | 2 |
| 15 | ಚಾಲ್ತಿಯಲ್ಲಿರುವ ಎಲೆಕ್ಟ್ರೋಮೆಕ್ಯಾನಿಕಲ್ ಮಾಪಕಗಳನ್ನು ಬದಲಾಯಿಸಿ ಎಲೆಕ್ಟ್ರಾನಿಕ್ ಮಾಪಕಗಳನ್ನು ಅಳವಡಿಸಿದ ಬಗ್ಗೆ | 2 | ಸಂಖ್ಯೆ | 2 |
| 16 | ಕ್ಲಿಪ್ತ ಸಮಯದಲ್ಲಿ ಮಾಸಿಕ ಎಂ.ಐ.ಎಸ್ ಮಾಹಿತಿ ಸಲ್ಲಿಸಿದ ಬಗ್ಗೆ (ಸಲ್ಲಿಸಿದ ದಿನಾಂಕದ ಆಧಾರದಲ್ಲಿ) | 5 | ಪ್ರತಿ ತಿಂಗಳು 2ನೇ ತಾರೀಖಿನೊಳಗಾಗಿ ಸಲ್ಲಿಸಿದರೆ | 5 |
| | | | ಪ್ರತಿ ತಿಂಗಳು 3ನೇ ತಾರೀಖಿನಲ್ಲಿ ಸಲ್ಲಿಸಿದರೆ | 4 |
| | | | ಪ್ರತಿ ತಿಂಗಳು 4ನೇ ತಾರೀಖಿನಲ್ಲಿ ಸಲ್ಲಿಸಿದರೆ | 3 |
| | | | ಪ್ರತಿ ತಿಂಗಳು 5ನೇ ತಾರೀಖಿನಲ್ಲಿ ಸಲ್ಲಿಸಿದರೆ | 2 |
| | | | ಪ್ರತಿ ತಿಂಗಳು 6ನೇ ತಾರೀಖಿನ ಮೇಲ್ಪಟ್ಟು ಸಲ್ಲಿಸಿದರೆ | 0 |
| 17 | ಎಲ್ಲಾ ಡಿ.ಟಿ.ಸಿ ಎನರ್ಜಿ ಆಡಿಟ್‌ಗಳನ್ನು ಯಾವ ತಿಂಗಳದ್ದು ಮಾಡಿದ ಹಾಗೂ ಮಾಸಿಕ ವರದಿ ಸಲ್ಲಿಸಿದ ಬಗ್ಗೆ | 5 | | 5 |
| | | | | 0 |
| 18 | ಪ್ರತಿ ತಿಂಗಳು ಫೀಡರ್ ಎನರ್ಜಿ ಆಡಿಟ್‌ಗಳನ್ನು ಮಾಡಿದ ಹಾಗೂ ಮಾಸಿಕ ವರದಿ ಸಲ್ಲಿಸಿದ ಬಗ್ಗೆ | 4 | ಪ್ರಸಕ್ತ ತಿಂಗಳದ್ದು ಸಲ್ಲಿಸಿದ್ದರೆ | 4 |
| | | | ಹಿಂದಿನ ತಿಂಗಳದ್ದು ಸಲ್ಲಿಸಿದ್ದರೆ | 0 |
| 19 | ವಾರ್ಷಿಕ ಸರಾಸರಿ ಎ.ಟಿ & ಸಿ ನಷ್ಟ | 5 | =<15% | 5 |
| | | | >15% | 0 |
| 20 | ಕಾರ್ಯ ಮತ್ತು ಪಾಲನೆ ಸಿಬ್ಬಂದಿಯು ಪರಿಶೀಲನೆ ಮಾಡಿ ಕಂಡುಹಿಡಿದ ಮತ್ತು ಸಂಜ್ಞಾ (vigilance) ಪ್ರಕರಣಗಳ ದಾಖಲಾತಿ ಮತ್ತು ಹಿಂಬಾಕಿ ಮೊತ್ತ | 2 | 100 ಪ್ರಕರಣ ದಾಖಲಾಗಿದ್ದರೆ | 2 |
| | | | 97 ರಿಂದ 99 ಪ್ರಕರಣ ದಾಖಲಾಗಿದ್ದರೆ | 1 |
| 21 | ವಿದ್ಯುತ್ ಅಪಘಾತಗಳು | 5 | ಅಪಘಾತಗಳು ಇಲ್ಲದಿದ್ದರೆ | 5 |
| | | | ಅಪಘಾತಗಳು ಇದ್ದರೆ | 0 |
| 22 | 1. ಕಂದಾಯ ವಸೂಲಾತಿ ಮತ್ತು ಬೇಡಿಕೆ ಹೆಚ್ಚಿಸಲು ವಿಶೇಷ ಆಂದೋಲನ<br>2. ವಿದ್ಯುತ್ ಪರಿವರ್ತಕಗಳ ದುರಸ್ತಿ ಪರಿವೀಕ್ಷಣೆ/ವಿಶೇಷ ಕಾರ್ಯಾಚರಣೆ<br>3. ಸರ್ಕಾರದ ವಿಶೇಷ ಯೋಜನೆಗಳ ಅನುಷ್ಠಾನಗಳ ಅಳವಡಿಕೆಯಲ್ಲಿ ಸಾಧಿಸಿದ ಪ್ರಗತಿ ವರದಿ (ಅಧೀಕ್ಷಕ ಇಂಜಿನಿಯರ್(ವಿ) ರವರ ವಿವೇಚನೆಗೆ ಒಳಪಟ್ಟಿದೆ) | 10 | | 10 |

ಮುಂದುವರೆದಂತೆ, ಪ್ರತಿ ವೃತ್ತ ವ್ಯಾಪ್ತಿಯಲ್ಲಿ ಗುರುತರವಾದ ಸೇವೆ ಸಲ್ಲಿಸುತ್ತಿರುವ **(1).ಸಹಾಯಕ ಮಾರ್ಗದಾಳು/ಮಾರ್ಗದಾಳು (2) ಮಾಪಕ ಓದುಗ ಮತ್ತು (3) ಕಿರಿಯ ಸಹಾಯಕ/ಸಹಾಯಕ/ಹಿರಿಯ ಸಹಾಯಕ** ವರ್ಗದ ತಲಾ ಒಬ್ಬರು ಸಿಬ್ಬಂದಿಗಳಿಗೆ ವ್ಯಕ್ತಿಗತವಾಗಿ ಗುರುತಿಸಿ ಪ್ರಶಂಸಾ ಪತ್ರ ಹಾಗೂ ನೆನಪಿನ ಕಾಣಿಕೆ ನೀಡಲು ಸಹ ಉದ್ದೇಶಿಸಲಾಗಿದ್ದು, ಈ ಸಂಬಂಧ ಕೆಳಕಂಡ ಮಾನದಂಡಗಳನ್ನು ವೃತ್ತಮಟ್ಟದಲ್ಲಿ ಪರಿಗಣಿಸಿ ಸಿಬ್ಬಂದಿಗಳ ಹೆಸರುಗಳನ್ನು ಮೇಲ್ಕಂಡ ಸಮಿತಿಗೆ ಸಂಬಂಧಿಸಿದ ವೃತ್ತದ ಅಧೀಕ್ಷಕ ಇಂಜಿನಿಯರ್(ವಿ) ರವರುಗಳು ದಿನಾಂಕ 26.04.2022 ರ ಒಳಗಾಗಿ ಸಲ್ಲಿಸುವುದು.

. . .4–

| ಕ್ರ.ಸಂ | ಹುದ್ದೆಯ ಹೆಸರು | ಪರಿಗಣಿಸಬೇಕಾದ ಮಾನದಂಡಗಳು |
|---|---|---|
| 1 | ಸಹಾಯಕ ಮಾರ್ಗದಾಳು ಮತ್ತು ಮಾರ್ಗದಾಳು | ಹಾಜರಾತಿ ಮತ್ತು ಸಮಯ ಪಾಲನೆ, ಸಮವಸ್ತ್ರ ಧರಿಸುವಿಕೆ, ವಿದ್ಯುತ್ ಸುರಕ್ಷತೆಯ ಬಗ್ಗೆ ತಿಳುವಳಿಕೆ ಹಾಗೂ ಕಾರ್ಯನಿರ್ವಹಿಸುವಲ್ಲಿ ಅಳವಡಿಸುವಿಕೆ ಗ್ರಾಹಕರೊಂದಿಗೆ ನಡವಳಿಕೆ, ಅನ್ವಯಿಸುವ ನಿಯಮಗಳ ತಿಳುವಳಿಕೆ ಹಾಗೂ ಪಾಲನೆ, ವಹಿಸಲಾದ ವಿದ್ಯುತ್ ಜಾಲದ ನಿರ್ವಹಣೆ, ವಿದ್ಯುತ್ ನಿಲುಗಡೆ/ಪುನರ್ ಸಂಪರ್ಕ (ಡಿ&ಆರ್) ಕಾರ್ಯದ ನಿರ್ವಹಣೆ, ತುರ್ತು ಕರೆಗಳಿಗೆ ಸ್ಪಂದಿಸುವಿಕೆ |
| 2 | ಮಾಪಕ ಓದುಗ | ಹಾಜರಾತಿ ಮತ್ತು ಸಮಯ ಪಾಲನೆ, ಸಮವಸ್ತ್ರ ಧರಿಸುವಿಕೆ, ನಿಗದಿತವಾಗಿ ಹಾಗೂ ನಿಯಮಿತವಾಗಿ ಮಾಪಕ ಓದುವಿಕೆ ಶೇಕಡವಾರು ಬಿಲ್ಲಿಂಗ್, Observation ಪುಸ್ತಕದಲ್ಲಿ ವಿಷಯಗಳ ದಾಖಲಿಸುವಿಕೆ ಹಾಗೂ ಅನುಸರಣೆ |
| 3 | ಕಿರಿಯ ಸಹಾಯಕ, ಸಹಾಯಕ ಮತ್ತು ಹಿರಿಯ ಸಹಾಯಕ | ನಿಗಮದ ಹಿತದೃಷ್ಟಿಯಿಂದ ನಿರ್ವಹಿಸಲಾದ ಯಾವುದೇ ಗುರುತರವಾದ ಕೆಲಸ ಕಾರ್ಯಗಳು ( ಈ ಸಂಬಂಧ ವಿವರವಾದ ವರದಿಯೊಂದಿಗೆ) |

**ಸೂಚನೆ: ಮೇಲ್ಕಂಡ ಮಾನದಂಡಗಳನ್ವಯ ಶಿಫಾರಸ್ಸುಗಳನ್ನು ದಿನಾಂಕ 26.04.2022 ರ ಒಳಗಾಗಿ ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾಸಂ) ರವರಿಗೆ ಸಂಬಂಧಿಸಿದ ಅಧೀಕ್ಷಕ ಇಂಜಿನಿಯರ್(ವಿ),ರವರುಗಳು ಕಡ್ಡಾಯವಾಗಿ ಮತ್ತು ಖುದ್ದಾಗಿ ಸಲ್ಲಿಸತಕ್ಕದ್ದು.**

ಆದೇಶದ ಮೇರೆಗೆ,

ಪ್ರಧಾನ ವ್ಯವಸ್ಥಾಪಕರು (ಆ & ಮಾ.ಸಂ)
ಚಾವಿಸನಿನಿ, ಮೈಸೂರು.

**ಪ್ರತಿಗಳು :**

1. ಮುಖ್ಯ ಇಂಜಿನಿಯರ್(ವಿ), ಮೈಸೂರು ವಲಯ, ಚಾವಿಸನಿನಿ, ಮೈಸೂರು.
2. ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ.ಪ), ನಿಗಮ ಕಛೇರಿ, ಚಾವಿಸನಿನಿ, ಮೈಸೂರು.
3. ಪ್ರಧಾನ ವ್ಯವಸ್ಥಾಪಕರು, ಎ&ಆರ್/ವಾಣಿಜ್ಯ/ತಾಂತ್ರಿಕ/ಖರೀದಿ/ಯೋಜನೆಗಳು ನಿಗಮ ಕಛೇರಿ, ಚಾವಿಸನಿನಿ, ಮೈಸೂರು.
4. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತ, ಚಾವಿಸನಿನಿ ರವರುಗಳ ಕಡ್ಡಾಯ ಅನುಸರಣೆಗಾಗಿ
5. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಕಾರ್ಯ ಮತ್ತು ಪಾಲನ ವಿಭಾಗ. ಚಾವಿಸನಿನಿ- ಇವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ.
6. ಸಂಬಂಧಿಸಿದ ಅಧಿಕಾರಿರವರುಗಳಿಗೆ.
7. ಆಪ್ತ ಕಾರ್ಯದರ್ಶಿ- ವ್ಯ.ನಿ/ನಿ(ತಾಂ)/ಮುಆಅ,
8. ಉಪ ಪ್ರಧಾನ ವ್ಯವಸ್ಥಾಪಕರು, ಎಂ.ಐ.ಎಸ್. ನಿಗಮ ಕಛೇರಿ, ಚಾವಿಸನಿನಿ, ಮೈಸೂರು ರವರು ವೆಬ್‌ಸೈಟನಲ್ಲಿ ಪ್ರಕಟಿಸುವುದು.
9. ಸಪ್ರವ್ಯ(ಆಂ.ನಿ)/ಪ್ರ.ಕ